ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	1270
ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು	ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	08.03.2022
ಉತ್ತರಿಸುವವರು	ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹಿರಿಯ ನಾಗರಿಕರ ಸಬಲೀಕರಣಕ್ಕಾಗಿ ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ; **(ವಿವರ ನೀಡುವುದು)**	ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹಿರಿಯ ನಾಗರಿಕರ ಸಬಲೀಕರಣಕ್ಕಾಗಿ ಇಲಾಖಾ ವತಿಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 1. ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರ 2. ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ 3. ಹಿರಿಯ ನಾಗರಿಕರ ವೃದ್ಧಾಶ್ರಮಗಳು 4. ಹಿರಿಯ ನಾಗರಿಕರಿಗೆ ಗುರುತಿನ ಚೀಟಿ. ವಿವರವನ್ನು **ಅನುಬಂಧ –01ರಲ್ಲಿ** ಒದಗಿಸಲಾಗಿದೆ.
ಆ	ಅಸಹಾಯಕ ಹಿರಿಯ ನಾಗರಿಕರಿಗಾಗಿ ಎಷ್ಟು ವೃದ್ಧಾಶ್ರಮಗಳನ್ನು ಸರ್ಕಾರ ನಡೆಸುತ್ತಿದೆ; (ವಿವರ ನೀಡುವುದು)	ಸರ್ಕಾರದ ವತಿಯಿಂದ ಯಾವುದೇ ವೃದ್ಧಾಶ್ರಮಗಳನ್ನು ನಡೆಸುತ್ತಿರುವುದಿಲ್ಲ. ರಾಜ್ಯ ಅನುದಾನದಡಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಜಿಲ್ಲೆಗಳಲ್ಲಿ ವೃದ್ಧಾಶ್ರಮಗಳನ್ನು ನಡೆಸುತ್ತಿದ್ದು, ವೃದ್ಧಾಶ್ರಮಗಳ ವಿವರವನ್ನು **ಅನುಬಂಧ–02ರಲ್ಲಿ** ಒದಗಿಸಲಾಗಿದೆ
ಇ	ಮೇಲ್ಕಂಡ ಜಿಲ್ಲೆಗಳಲ್ಲಿ ಹಿರಿಯ ನಾಗರಿಕರ ಮನೋವಿಕಾಸಕ್ಕಾಗಿ ಮನರಂಜನೆಗಾಗಿ ಸರ್ಕಾರ ಯಾವ ಕ್ರಮಕೈಗೊಂಡಿದೆ? (ವಿವರ ನೀಡುವುದು)	ರಾಜ್ಯ ಅನುದಾನದಡಿ ನಡೆಯುತ್ತಿರುವ ವೃದ್ಧಾಶ್ರಮಗಳಲ್ಲಿ ಹಾಗೂ ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರಗಳಲ್ಲಿ ಹಿರಿಯ ನಾಗರಿಕರು ತಮ್ಮ ವೇಳೆಯನ್ನು ಸದುಪಯೋಗ ಪಡಿಸಿಕೊಳ್ಳುವ ನಿಟ್ಟಿನಲ್ಲಿ ದೂರದರ್ಶನ, ವಾರಪತ್ರಿಕೆ. ದಿನ ಪತ್ರಿಕೆ ಸೌಲಭ್ಯವನ್ನು ನೀಡಲಾಗಿದೆ ಹಾಗೂ ಮನೋರಂಜನೆ ಹಾಗೂ ಇತರೆ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಇಲಾಖಾ ವತಿಯಿಂದ ಪ್ರತಿ ವರ್ಷ ಅಕ್ಟೋಬರ್–01 ಹಿರಿಯ ನಾಗರಿಕರ ದಿನಾಚರಣೆಯಂದು ವಿವಿಧ ವಿಭಾಗಗಳಲ್ಲಿ ಅತ್ಯುತ್ತಮ ಸೇವೆಗೈದ 6 ವ್ಯಕ್ತಿಗಳಿಗೆ ಹಾಗೂ ಒಂದು ಸ್ವಯಂಸೇವಾ ಸಂಸ್ಥೆ ಸೇರಿ ಒಟ್ಟು 7 ಪ್ರಶಸ್ತಿಗಳನ್ನು ನೀಡಲಾಗುತ್ತಿದೆ

ಮಮಇ 66 ಪಿಹೆಚ್ ಪಿ 2022

(ಆಚಾರ ಹಾಲಪ್ಪ ಬಸಪ್ಪ)
ಮಾನ್ಯ ಗಣಿ ಮತ್ತು ಭೂ ವಿಜ್ಞಾನ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖಾ ಸಚಿವರು.

<u>ಅನುಬಂಧ-01</u>

ಹಿರಿಯ ನಾಗರಿಕರಿಗಾಗಿ ಜಾರಿಗೊಳಿಸುತ್ತಿರುವ ಯೋಜನೆಗಳು

1. ಹಗಲು ಯೋಗಕ್ಷೇಮ ಕೇಂದ್ರಗಳು:

ರಾಜ್ಯದ 30 ಜಿಲ್ಲೆಗಳಿಗೆ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದ ಮಂಜೂರಾತಿ ದೊರೆತಿದ್ದು, ಪ್ರತಿ ಕೇಂದ್ರದಲ್ಲಿ ಸುಮಾರು 50–150 ಫಲಾನುಭವಿಗಳಿಗೆ ಅವಕಾಶ ಕಲ್ಪಿಸಿಕೊಡಲಾಗಿದ್ದು, ಸದರಿ ಯೋಜನೆಗೆ ಸರ್ಕಾರದಿಂದ ವಾರ್ಷಿಕ ರೂ 11.20 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗುತ್ತದೆ.

2. ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳು:

ಹಿರಿಯ ನಾಗರಿಕರು ಕಿರುಕುಳ, ಹಣಕಾಸಿನ ಶೋಷಣೆ, ಮಾನಸಿಕ ತುಮುಲ ಮತ್ತು ದುರ್ಬಲರಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇಂತಹ ಸಮಸ್ಯೆಗಳ ನಿವಾರಣೆಗಾಗಿ ಹಾಗೂ ತುರ್ತು ಸಹಾಯಕ್ಕಾಗಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ರಾಜ್ಯದ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 28 ಜಿಲ್ಲೆಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಆವರಣದಲ್ಲಿ, ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಿಂದ ನಡೆಸಲಾಗುತ್ತಿದೆ.

3. ಹಿರಿಯ ನಾಗರಿಕರ ವೃದ್ಧಾಶ್ರಮ:

ರಾಜ್ಯದ 30 ಜಿಲ್ಲೆಗಳಲ್ಲಿ ನಿರ್ಗತಿಕ ಹಿರಿಯ ನಾಗರಿಕರಿಗಾಗಿ ವೃದ್ಧಾಶ್ರಮಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದ್ದು, ಈ ವೃದ್ಧಾಶ್ರಮದಲ್ಲಿ 25 ನಿರ್ಗತಿಕ ಹಿರಿಯ ನಾಗರಿಕರನ್ನು ದಾಖಲಿಸಿಕೊಳ್ಳಲು ಅವಕಾಶವಿದ್ದು, ಒಂದು ವೃದ್ಧಾಶ್ರಮದ ನಿರ್ವಹಣೆಗಾಗಿ ವಾರ್ಷಿಕ ರೂ [illegible]0ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಇದರಲ್ಲಿ ಸಿಬ್ಬಂದಿ ವೆಚ್ಚ, ನಿರ್ವಹಣಾ ವೆಚ್ಚ, ಔಷಧಿ, ವಸ್ತ್ರ, ಬಾಡಿಗೆ, ವೃತ್ತ ಪತ್ರಿಕೆ ಹಾಗೂ ಇತರೆ ವೆಚ್ಚಗಳಿಗಾಗಿ ಒಟ್ಟು ಯೋಜನಾ ವೆಚ್ಚದ ಶೇ.90ರಷ್ಟು ಅನುದಾನವನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡಲಾಗುತ್ತಿದ್ದು ಉಳಿದ ಶೇ.10ರಷ್ಟನ್ನು ಸಂಸ್ಥೆಯು ಭರಿಸಬೇಕಾಗುತ್ತದೆ. ಅನುದಾನವನ್ನು ಜಿಲ್ಲಾ ಪಂಚಾಯತ್ ಮೂಲಕ ಮಂಜೂರು ಮಾಡಲಾಗುತ್ತಿದೆ.

ರಾಜ್ಯದ ಪ್ರತಿ ಕಂದಾಯ ಉಪ ವಿಭಾಗದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವೃದ್ಧಾಶ್ರಮಗಳನ್ನು ಪ್ರಾರಂಭಿಸಲು ಅವಕಾಶವಿದ್ದು, ಪ್ರಸ್ತುತ 9 ಕಂದಾಯ ಉಪ ವಿಭಾಗಕ್ಕೆ ವೃದ್ಧಾಶ್ರಮ ನಡೆಸಲು ಆಡಳಿತಾತ್ಮಕ ಮಂಜೂರಾತಿ ದೊರೆತ್ತಿರುತ್ತದೆ

4. ಹಿರಿಯ ನಾಗರಿಕರಿಗೆ ಗುರುತಿನ ಚೀಟಿಗಳು:

60 ವರ್ಷ ಮೇಲ್ಪಟ್ಟ ವಯೋಮಾನದ ಹಿರಿಯ ನಾಗರಿಕರ ಗುರುತಿನ ಚೀಟಿ ಪಡೆಯಲು ಸೇವಾ ಸಿಂಧು ಆನ್‌ಲೈನ್ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದ್ದು, ದಿ:31.10.2018 ರಿಂದ ಹಿರಿಯ ನಾಗರಿಕರು ಸೇವಾ ಸಿಂಧು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ ಹಿರಿಯ ನಾಗರಿಕರ ಗುರುತಿನ ಚೀಟಿಯನ್ನು ಪಡೆಯಬಹುದಾಗಿದೆ.

ಅನುಬಂಧ--02

ರಾಜ್ಯ ಅನುದಾನಿತ ವೃದ್ಧಾಶ್ರಮಗಳ ಮಾಹಿತಿ

ಕ್ರ ಸಂ.	ಜಿಲ್ಲೆಯ ಹೆಸರು	ವೃದ್ಧಾಶ್ರಮ ನಡೆಸುತ್ತಿರುವ ಸಂಸ್ಥೆಯ ಹೆಸರು (ಜಿಲ್ಲಾ ವಲಯದಡಿ)
1	ಬೆಂಗಳೂರು ನಗರ	ತುಂಗಭದ್ರ ವಿದ್ಯಾ ಸಂಸ್ಥೆ, (ರಿ) ನಂ 113, 2ನೇ ಕ್ರಾಸ್, 2ನೇ ಹಂತ ಮಹಾಲಕ್ಷ್ಮಿಪುರಂ, ಬೆಂಗಳೂರು-17
2	ಬೆಂಗಳೂರು ನಗರ	ಚೆಶೈರ್ ಹೋಮ್ ಇಂಡಿಯಾ (ರಿ). ನಂ. 408, ಇ.ಪಿ.ಪಿ ರೋಡ್, ವಿಮಾನ ನಿಲ್ದಾಣ ರಸ್ತೆ, ಮಣಿಪಾಲ ಆಸ್ಪತ್ರೆ ಎದುರು. ಬೆಂಗಳೂರು-17
3	ಬೆಂಗಳೂರು (ಗ್ರಾ)	–
4	ಬಳ್ಳಾರಿ	ಎಡೆಯೂರು ಶ್ರೀ [illegible] ವಿದ್ಯಾಪೀಠ ರಾಮನಗರ, ಹಗರಿ ಬೊಮ್ಮನಹಳ್ಳಿ, ಬಳ್ಳಾರಿ
5	ಬೆಳಗಾವಿ	ಡಾ॥ ಬಿ.ಆರ್ ಅಂಬೇಡ್ಕರ್ ಹರಿಜನ ಸೊಸೈಟಿ, ಮುಚ್ಚಂಡಿ, ಬೆಳಗಾವಿ-590010
6	ಬೀದರ್	ರಮಾಬಾಯಿ ಅಂಬೇಡ್ಕರ್ ಮಹಿಳಾ ಮಂಡಳ ಜೌರಾದ್ ಜಿ. ಬೀದರ್
7	ಬಾಗಲಕೋಟೆ	ಶ್ರೀ ಕನಕದಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ). ವೃದ್ಧಾಶ್ರಮ. ಬೀಳಗಿ ಬಾಗಲಕೋಟೆ
8	ವಿಜಯಪುರ	ಶ್ರೀ ಸಿದ್ದೇಶ್ವರ ವಿದ್ಯಾಪೀಠ, (ರಿ) [illegible] ನಗರ. ಬಸವನ ಬಾಗೇವಾಡಿ ರೋಡ್, ವಿಜಯಪುರ
9	ಚಿಕ್ಕಬಳ್ಳಾಪುರ	ಚೈತನ್ಯ ವೃದ್ಧಾಶ್ರಮ, ನಂದಾದೀಪ ಅಂಗವಿಕಲರ ಶಿಕ್ಷಣ ಮತ್ತು ಪುನಶ್ಚೇತನ ಸಂಸ್ಥೆ, ಕೈವಾರ, ಚಿಂತಾಮಣಿ ತಾ॥ ಚಿಕ್ಕಬಳ್ಳಾಪುರ
10	ಚಿಕ್ಕಮಗಳೂರು	ರೋಟರಿ ಅಂಡ್ ಇನ್ನರ್ ವ್ಹೀಲ್ ಟ್ರಸ್ಟ್, ಜೀವನಸಂಧ್ಯಾ ವೃದ್ಧಾಶ್ರಮ ಕದ್ರಿಮಿದ್ರಿ, ಮುಕ್ತಿಹಳ್ಳಿ ಅಂಚೆ, ಚಿಕ್ಕಮಗಳೂರು
11	ಚಿತ್ರದುರ್ಗ	ಶ್ರೀ ಶಕ್ತಿ ಮಹಿಳಾ ಮಂಡಳಿ, ಚಿತ್ರದುರ್ಗ
12	ಧಾರವಾಡ	ಶ್ರೀ ಮೈತ್ರಿ ಮಹಿಳಾ ಮಂಡಳ ವೃದ್ಧಾಶ್ರಮ. (ರಿ), ಎಸ್.ಜಿ ಜಿಗಳೂರ ಬಿಲ್ಡಿಂಗ್, ಬಂಕಾಪುರ ಚೌಕ್, ಪಿ.ಬಿ ರೋಡ್. ಹುಬ್ಬಳ್ಳಿ ಅಂಡ್ ಬಿದ್ನಾಳ ಕ್ರಾಸ್, ಶಕ್ತಿನಗರ ಹುಬ್ಬಳ್ಳಿ
13	ಗದಗ	ಜಿ.ಎಚ್ ಹುಪನಾಳ ಪ್ರತಿಷ್ಠಾನ [illegible] ಶಾಂತಿಧಾಮ ವೃದ್ಧಾಶ್ರಮ, ಮುಕ್ತಿಮಂದಿರ ರೋಡ್ ಲಕ್ಷ್ಮೇಶ್ವರ
14	ಕಲಬುರಗಿ	ಮ[illegible] ತಾಯಿ ಮಹಿಳಾ [illegible]
15	ಹಾಸನ	ಚೈತನ್ಯ ಮಂದಿರ ವೃದ್ಧಾಶ್ರಮ, [illegible] ಹಾಸನ ತಾ
16	ಹಾವೇರಿ	ಶ್ರೀ ಶಕ್ತಿ ಅಸೋಸಿಯೇಷನ್, ಗುತ್ತೂರು ಕಾಲೋನಿ, ಹರಿಹರ ದಾವಣಗೆರೆ ಜಿಲ್ಲೆ ಇವರ ವತಿಯಿಂದ ನಾಗೇಂದ್ರ ಮಟ್ಟಿ ರೈಲ್ವೆ ಸ್ಟೇಷನ್ ಹತ್ತಿರ, ಹಾವೇರಿ.
17	ಕೋಲಾರ	ದಿವ್ಯಜ್ಯೋತಿ ಎಜುಕೇಷನ್ ಅಂಡ್ ಕಲ್ಚರಲ್ ಸೊಸೈಟಿ (ರಿ), ಅರಿಣಿಕುಂಟೆ, ಮಾಣಿಗಾನ ಹಳ್ಳಿ ಅಂಚೆ ಶ್ರೀನಿವಾಸಪುರ ತಾ॥ ಕೋಲಾರ
18	ಕೊಪ್ಪಳ	ವಿದ್ಯಾನಂದ ಗುರುಕುಲ ವೃದ್ಧಾಶ್ರಮ. ಶಿಕ್ಷಣ ವಿಶ್ವಸ್ಥ ಮಂಡಲಿ. ಕುಕನೂರು. ಕೊಪ್ಪಳ
19	ಮಂಡ್ಯ	ಸೇವಾಕಿರಣ ಚಾರಿಟಬಲ್ ಟ್ರಸ್ಟ್ ವೃದ್ಧಾಶ್ರಮ ಬಾಪ್ ನಗರ ಮಂಡ್ಯ
20	ರಾಮನಗರ	ಶಾಂತಲಾ ಚಾರಿಟೇಬಲ್ ಟ್ರಸ್ಟ್, ರಾಮನಗರ ಸಂಸ್ಥೆ ವತಿಯಿಂದ ವಾರ್ಡ್ ಸಂ. 31, ಅರ್ಚಕರ ಹಳ್ಳಿ, ಬಿ.ಎಂ. ರಸ್ತೆಯಲ್ಲಿ ನಡೆಸುತ್ತಿರುವ ದಾರಿದೀಪ ವೃದ್ಧಾಶ್ರಮ ರಾಮನಗರ
21	ಶಿವಮೊಗ್ಗ	ಜೀವನಕಿರಣ ವೃದ್ಧಾಶ್ರಮ, ಅಗರದ ಹಳ್ಳಿ, ಭದ್ರಾವತಿ ತಾ॥ ಶಿವಮೊಗ್ಗ ಜಿಲ್ಲೆ
22	ತುಮಕೂರು	ಶ್ರೀಸ್ವಾಮಿ ಸರ್ವಧರ್ಮ ಶರಣಾಲಯ ಟ್ರಸ್ಟ್ (ರಿ), ಶ್ರೀ ಸಾಯಿ ವೃದ್ಧಾಶ್ರಮ, ಕಣಿವೇನಹಳ್ಳಿಗೇಟ್, ಪಾವಗಡ ತಾ॥ ತುಮಕೂರು ಜಿಲ್ಲೆ
23	ಮಡಿಕೇರಿ	ಶ್ರೀ ಶಕ್ತಿ ಅಸೋಸಿಯೇಷನ್ (ರಿ) [illegible], ಕೂಡಿಗೆ ಕುಶಾಲನಗರ, ಸೋಮವಾರಪೇಟೆ ತಾಲ್ಲೂಕು, ಕೊಡಗು
24	ಯಾದಗಿರಿ	ಅಕ್ಷತಾ ಮಹಿಳಾ ಮಂಡಳಿ, ಯಾದಗಿರಿ
25	ಉತ್ತರ ಕನ್ನಡ	–
26	ಚಾಮರಾಜನಗರ	ಜ್ಞಾನಸಿಂಧು ವೃದ್ಧಾಶ್ರಮ, ಜ್ಞಾನಸಿಂಧು ಎಜುಕೇಷನ್ ಅಂಡ್ ಕಲ್ಚರಲ್ ಸೊಸೈಟಿ, ಸಂತೇಮರಹಳ್ಳಿ, ಚಾಮರಾಜನಗರ
27	ದಕ್ಷಿಣ ಕನ್ನಡ	ಅಭಯ ಆಶ್ರಯ, (ರಿ) ಅಸೈಗೋಳಿ. ಕೊಣಾಜೆ, ಮಂಗಳೂರು
28	ಮೈಸೂರು	ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾ ವಿದ್ಯಾಪೀಠ (ಜೆಎಸ್ಎಸ್) ನಂ 915. 5ನೇ ಮೈನ್, ಅರವಿಂದ ನಗರ ರಾಮಾನುಜ ರಸ್ತೆ, ಮೈಸೂರು-[illegible]
29	ಉಡುಪಿ	–
30	ದಾವಣಗೆರೆ	–
31	ರಾಯಚೂರು	–

ರಾಜ್ಯದಲ್ಲಿ ಕಂದಾಯ ಉಪ ವಿಭಾಗಗಳಲ್ಲಿ ಆಡಳಿತಾತ್ಮಕ ಮಂಜೂರಾತಿಯಾಗಿರುವ ವೃದ್ಧಾಶ್ರಮಗಳ ಮಾಹಿತಿ

ಕ್ರಸಂ	ಉಪ ವಿಭಾಗದ ಹೆಸರು	ವೃದ್ಧಾಶ್ರಮ ನಡೆಸುತ್ತಿರುವ ಸಂಸ್ಥೆಯ ಹೆಸರು (ಜಿಲ್ಲಾ ವಲಯದಡಿ)
01	ಮೈಸೂರು	ಮೈಸೂರು ಜಿಲ್ಲೆಯ ಮೈಸೂರು ಕಂದಾಯ ಉಪವಿಭಾಗದಲ್ಲಿ ಶ್ರೀ ರಾಮಕೃಷ್ಣ ಸೇವಾ ಕೇಂದ್ರ ಟ್ರಸ್ಟ್, ಯಾಚೇನಹಳ್ಳಿ, ಟಿ.ನರಸೀಪುರ ತಾಲ್ಲೂಕು. ಮೈಸೂರು ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಶ್ರೀ ರಾಮಕೃಷ್ಣ ಸೇವಾ ಕೇಂದ್ರ ಟ್ರಸ್ಟ್ ವೃದ್ಧಾಶ್ರಮ ದೂರವಾಣಿ ಸಂ:9606140914,8105353599
02	ಹುಣಸೂರು	ಮೈಸೂರು ಜಿಲ್ಲೆಯ ಹುಣಸೂರು ಕಂದಾಯ ಉಪವಿಭಾಗದಲ್ಲಿ ಮಾತೃ ಶ್ರೀ ವಿದ್ಯಾ ಶಿಕ್ಷಣ ಸಂಸ್ಥೆ (ರಿ), ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಮಾತೃ ಶ್ರೀ ವಿದ್ಯಾ ಶಿಕ್ಷಣ ಸಂಸ್ಥೆ (ರಿ) ವೃದ್ಧಾಶ್ರಮ ದೂರವಾಣಿ ಸಂಖ್ಯೆ:08223-264690
03	ಬೀದರ್	ಬೀದರ್ ಜಿಲ್ಲೆಯ ಬೀದರ್ ಕಂದಾಯ ಉಪವಿಭಾಗದಲ್ಲಿ ಅಕ್ಕಮಹಾದೇವಿ ಯುವತಿ ಮಂಡಳಿ ಗಾದಗಿ (ರಿ), ಬೀದರ್ ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಅಕ್ಕಮಹಾದೇವಿ ಯುವತಿ ಮಂಡಳಿ ಗಾದಗಿ (ರಿ), ವೃದ್ಧಾಶ್ರಮ ದೂರವಾಣಿ ಸಂ:9343605111
04	ಹಾಸನ	ಹಾಸನ ಜಿಲ್ಲೆಯ ಹಾಸನ ಕಂದಾಯ ಉಪವಿಭಾಗದಲ್ಲಿ ಶ್ವೇತ ವಿದ್ಯಾ ಸಂಸ್ಥೆ (ರಿ), ದಾಸರಕೊಪ್ಪಲು, ಹಾಸನ ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಶ್ವೇತ ವಿದ್ಯಾ ಸಂಸ್ಥೆ (ರಿ) ವೃದ್ಧಾಶ್ರಮ ದೂರವಾಣಿ ಸಂ:08172-245287. 9448330386
05	ಸಕಲೇಶಪುರ	ಹಾಸನ ಜಿಲ್ಲೆಯ ಸಕಲೇಶಪುರ ಕಂದಾಯ ಉಪವಿಭಾಗದಲ್ಲಿ ಮಧುಶ್ರೀ ಮಹಿಳಾ ಸಮಾಜ (ರಿ). ಅರಕಲಗೂಡು. ಹಾಸನ ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಮಧುಶ್ರೀ ಮಹಿಳಾ ಸಮಾಜ (ರಿ) ವೃದ್ಧಾಶ್ರಮ ದೂರವಾಣಿ ಸಂ:08157220511, 9[illegible]4[illegible]707511
06	ಸಾಗರ	ಶಿವಮೊಗ್ಗ ಜಿಲ್ಲೆಯ ಸಾಗರ ಕಂದಾಯ ಉಪವಿಭಾಗದಲ್ಲಿ ನಂದಾದೀಪ ಅಂಗವಿಕಲ ಶಿಕ್ಷಣ ಮತ್ತು ಪುನಶ್ಚೇತನ ಸಂಸ್ಥೆ (ರಿ) ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ನಂದಾದೀಪ ಅಂಗವಿಕಲ ಶಿಕ್ಷಣ ಮತ್ತು ಪುನಶ್ಚೇತನ ಸಂಸ್ಥೆ (ರಿ) ವೃದ್ಧಾಶ್ರಮ, ದೂರವಾಣಿ ಸಂ:08027931195, 2393299
07	ಶಿವಮೊಗ್ಗ	ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ಕಂದಾಯ ಉಪವಿಭಾಗದಲ್ಲಿ ಸಿದ್ಧೇಶ್ವರ ರೂರಲ್ ಡೆವಲಪ್‌ಮೆಂಟ್ ಸೊಸೈಟಿ (ರಿ) ಹಿರಿಯೂರು ಚಿತ್ರದುರ್ಗ ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಸಿದ್ಧೇಶ್ವರ ರೂರಲ್ ಡೆವಲಪ್‌ಮೆಂಟ್ ಸೊಸೈಟಿ (ರಿ) ವೃದ್ಧಾಶ್ರಮ ದೂರವಾಣಿ ಸಂ:08193271524
08	ತುಮಕೂರು	ತುಮಕೂರು ಜಿಲ್ಲೆಯ ತುಮಕೂರು ಕಂದಾಯ ಉಪವಿಭಾಗದಲ್ಲಿ ಶ್ರೀ ಶಾರದಾಂಬ ಟ್ರಸ್ಟ್ (ರಿ), ತುಮಕೂರು ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಶ್ರೀ ಶಾರದಾಂಬ ಟ್ರಸ್ಟ್ (ರಿ), ವೃದ್ಧಾಶ್ರಮ ದೂರವಾಣಿ ಸಂ:08162290[illegible]
09	ಗದಗ	ಗದಗ ಜಿಲ್ಲೆಯ ಗದಗ ಕಂದಾಯ ಉಪವಿಭಾಗದಲ್ಲಿ ಶ್ರೀ ಜೀವನಜ್ಯೋತಿ ಸೇವಾ ಸಂಸ್ಥೆ (ರಿ), [illegible] ಕಾಂಪ್ಲೆಕ್ಸ್ ನರಸಾಪುರ [illegible] ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಶ್ರೀ ಜೀವನಜ್ಯೋತಿ ಸೇವಾ ಸಂಸ್ಥೆ (ರಿ) ವೃದ್ಧಾಶ್ರಮ ದೂರವಾಣಿ ಸಂ:9448133320, 990[illegible]424263